# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 981
ಸದಸ್ಯರ ಹೆಸರು : ಶ್ರೀ ಹೆಚ್.ಎಸ್. ಗೋಪಿನಾಥ್
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 24.07.2024

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಸಾರಿಗೆ ಇಲಾಖೆಯಲ್ಲಿ ಎಲೆಕ್ಟ್ರಾನಿಕ್ ಬಸ್‌ಗಳ ಬಳಕೆಯನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಎಲೆಕ್ಟ್ರಿಕ್ ಬಸ್‌ಗಳ ಬಳಕೆಯನ್ನು ಉತ್ತೇಜಿಸಲು ಕೈಗೊಂಡಿರುವ ಕ್ರಮ ಈ ಕೆಳಕಂಡಂತಿದೆ:<br>**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:**<br>ಪ್ರಸ್ತುತ ನಿಗಮದಲ್ಲಿ ಕೇಂದ್ರ ಸರ್ಕಾರದ ಫೇಮ್-2 ಯೋಜನೆಯಡಿಯಲ್ಲಿ ಮಂಜೂರಾಗಿರುವ 50 ಸಂಖ್ಯೆ ಹವಾನಿಯಂತ್ರಿತ ವಿದ್ಯುತ್ ಚಾಲಿತ (ಎಲೆಕ್ಟ್ರಿಕ್) ವಾಹನಗಳನ್ನು ಜಿ.ಸಿ.ಸಿ ಆಧಾರದಲ್ಲಿ ಬೆಂಗಳೂರು ಸೇರಿದಂತೆ 06 ನಗರಗಳಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ.<br>ಮುಂದುವರೆದು, 300 ಸಂಖ್ಯೆಯ ವಿದ್ಯುತ್‌ಚಾಲಿತ ವಾಹನಗಳನ್ನು ಜಿ.ಸಿ.ಸಿ (ಒಟ್ಟು ಒಪ್ಪಂದದ ವೆಚ್ಚ) ಆಧಾರದ ಮೇರೆಗೆ ಕಾರ್ಯಾಚರಿಸಲು ಟೆಂಡರ್ ಅಹ್ವಾನಿಸಲಾಗಿದ್ದು, ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:**<br>ಬೆಂಗಳೂರು ಸ್ಮಾರ್ಟ್‌ಸಿಟಿ ಯೋಜನೆಯಡಿ ನೀಡಲಾಗಿರುವ ಅನುದಾನದಲ್ಲಿ 90 ಹವಾನಿಯಂತ್ರಣ ರಹಿತ ಮಿಡಿ ಎಲೆಕ್ಟ್ರಿಕ್ ಬಸ್ಸುಗಳನ್ನು ಹಾಗೂ ಕೇಂದ್ರ ಸರ್ಕಾರದ ಫೇಮ್-2 ಯೋಜನೆಯಡಿ 300 ಹವಾನಿಯಂತ್ರಣ ರಹಿತ ಎಲೆಕ್ಟ್ರಿಕ್ ಬಸ್ಸುಗಳನ್ನು ಜಿ.ಸಿ.ಸಿ. ಆಧಾರದ ಮೇಲೆ ಈಗಾಗಲೇ ಕಾರ್ಯಾಚರಣೆ ಮಾಡಲಾಗುತ್ತಿದೆ.<br>CESLನ ಫೇಮ್-2 ಯೋಜನೆಯಡಿಯಲ್ಲಿ ಜಿಸಿಸಿ ಮಾದರಿಯಲ್ಲಿ ಕಾರ್ಯಾಚರಣೆ ಮಾಡಲು ಮಂಜೂರಾಗಿರುವ 921 ಎಲೆಕ್ಟ್ರಿಕ್ ಬಸ್ಸುಗಳ ಪೈಕಿ ಇಲ್ಲಿಯವರೆಗೆ 333 ಬಸ್ಸುಗಳು ಸಂಸ್ಥೆಯಲ್ಲಿ ಕಾರ್ಯಾಚರಣೆಯಲ್ಲಿದ್ದು, ಇನ್ನುಳಿದ ಬಸ್ಸುಗಳನ್ನು ಪ್ರಸಕ್ತ ಸಾಲಿನಲ್ಲಿ ಹಂತಹಂತವಾಗಿ ಕಾರ್ಯಾಚರಣೆಗೊಳಿಸಲಾಗುವುದು.<br>ನಗರ ಭೂಸಾರಿಗೆ ನಿರ್ದೇಶನಾಲಯ (DULT) ಹಾಗೂ NCAP (National Clean Air Programme) ಯೋಜನೆಯಡಿಯಲ್ಲಿ 120 ಹವಾನಿಯಂತ್ರಣ ರಹಿತ ಮಿಡಿ ಎಲೆಕ್ಟ್ರಿಕ್ ವಾಹನಗಳನ್ನು ಹಾಗೂ 10 ಹವಾನಿಯಂತ್ರಿತ ಡಬಲ್‌ಡೆಕ್ಕರ್ ಎಲೆಕ್ಟ್ರಿಕ್ ವಾಹನಗಳನ್ನು ಜಿಸಿಸಿ ಆಧಾರದ ಮೇಲೆ ಕಾರ್ಯಾಚರಣೆ ಸಂಬಂಧ ಆಹ್ವಾನಿಸಿರುವ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>ವಿಶೇಷ ಬಂಡವಾಳ ನೆರವಿನಡಿ ಒದಗಿಸಿರುವ ಅನುದಾನದಲ್ಲಿ 320 ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್‌ಗಳನ್ನು ಸಂಸ್ಥೆಯಲ್ಲಿ ಕಾರ್ಯಾಚರಿಸಲು ಆದೇಶ ನೀಡಲಾಗಿದ್ದು, ಅವುಗಳನ್ನು ಪ್ರಸಕ್ತ ಸಾಲಿನಲ್ಲಿ ಹಂತ ಹಂತವಾಗಿ ಕಾರ್ಯಾಚರಣೆಗೊಳಿಸಲಾಗುವುದು.<br>NCAP (National Clean Air Programme) ಯೋಜನೆಯಡಿಯಲ್ಲಿ 76 ಹವಾನಿಯಂತ್ರಣ ರಹಿತ ಎಲೆಕ್ಟ್ರಿಕ್ ವಾಹನಗಳನ್ನು ಜಿಸಿಸಿ ಆಧಾರದ ಮೇಲೆ ಕಾರ್ಯಾಚರಣೆ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | **ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:** 350 ಎಲೆಕ್ಟ್ರಿಕ್ ಬಸ್‌ಗಳನ್ನು ಸಂಸ್ಥೆಯ ಆಂತರಿಕ ಸಂಪನ್ಮೂಲದಿಂದ ಭರಿಸಿ ಜಿ.ಸಿ.ಸಿ. ಮಾದರಿಯಲ್ಲಿ ಕಾರ್ಯಾಚರಿಸಲು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. |
| ಆ | ಶಕ್ತಿ ಯೋಜನೆಯು ಜಾರಿಗೆ ಬಂದಾಗಿನಿಂದ ಇದುವರೆಗೂ ಎಷ್ಟು ಬಸ್ಸುಗಳನ್ನು ಖರೀದಿಸಲಾಗಿದೆ; ಮತ್ತು ಸರ್ಕಾರದ ಬೊಕ್ಕಸಕ್ಕೆ ಉಂಟಾಗಿರುವ ನಷ್ಟ ಎಷ್ಟು: (ವಿವರ ನೀಡುವುದು) | ಶಕ್ತಿ ಯೋಜನೆಯು ಜಾರಿಗೆ ಬಂದಾಗಿನಿಂದ ಇದುವರೆಗೂ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ 2023-24 ಹಾಗೂ 2024-25 ನೇ ಸಾಲಿನಲ್ಲಿ ಇದುವರೆಗೆ ಸೇರ್ಪಡೆ ಮಾಡಲಾದ ಹಾಗೂ 2024-25ನೇ ಸಾಲಿನಲ್ಲಿ ಸೇರ್ಪಡೆಗೊಳಿಸಲಾಗುತ್ತಿರುವ ಬಸ್ಸುಗಳ ವಿವರ ಈ ಕೆಳಕಂಡಂತಿದೆ:- |
| ಇ | ಯಾವ ಯಾವ ಕಂಪನಿಗಳಿಂದ ಎಷ್ಟು ಮೊತ್ತಕ್ಕೆ ಬಸ್ ಗಳನ್ನು ಖರೀದಿಸಲಾಗಿದೆ; | |

| ಸಂಸ್ಥೆ | ಸೇರ್ಪಡೆಯಾದ ವಾಹನಗಳ ಸಂಖ್ಯೆ | ಸೇರ್ಪಡೆಗೊಳಿಸ-ಲಾಗುತ್ತಿರುವ ವಾಹನಗಳ ಸಂಖ್ಯೆ |
|---|---|---|
| ಕ.ರಾ.ರ.ಸಾ.ನಿಗಮ | 943 | 595 |
| ಬೆಂ.ಮ.ಸಾ.ಸಂಸ್ಥೆ | 343 | 1718 |
| ವಾ.ಕ.ರ.ಸಾ.ಸಂಸ್ಥೆ | 437 | 712 |
| ಕ.ಕ.ರ.ಸಾ.ನಿಗಮ | 902 | 485 |
| **ಒಟ್ಟು** | **2625** | **3510** |

ಬಸ್‌ಗಳನ್ನು ಖರೀದಿಸಲಾಗಿರುವ ವಿವಿಧ ಕಂಪನಿಗಳ ಮಾಹಿತಿ ಕೆಳಕಂಡಂತಿದೆ:

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**

| ಕಂಪನಿ ಹೆಸರು | ಬಸ್ಸಿನ ಮಾದರಿ | ಖರೀದಿಸಲಾದ ಬಸ್ಸುಗಳ ಸಂಖ್ಯೆ | ಖರೀದಿ ಮೊತ್ತ |
|---|---|---|---|
| ಮೆ: ಅಶೋಕ್‌ಲೇಲ್ಯಾಂಡ್ ಲಿ | ಕರ್ನಾಟಕ ಸಾರಿಗೆ | 90 | 40.09 |
| ಮೆ: ಟಾಟಾ ಮೋಟಾರ್ಸ್‌ಲಿ | ಕರ್ನಾಟಕ ಸಾರಿಗೆ | 150 | 58.43 |
| ಮೆ: ಟಾಟಾ ಮೋಟಾರ್ಸ್‌ಲಿ | ನಗರ ಸಾರಿಗೆ | 50 | 19.59 |
| ಮೆ: ಅಶೋಕ್‌ಲೇಲ್ಯಾಂಡ್ ಲಿ | ಕರ್ನಾಟಕ ಸಾರಿಗೆ (ಅಶ್ವಮೇಧ ಕ್ಲಾಸಿಕ್) | 605 | 251.37 |
| ಮೆ: ಅಶೋಕ್‌ಲೇಲ್ಯಾಂಡ್ ಲಿ | ನಾನ್‌ಎಸಿ ಸ್ಲೀಪರ್(ಪಲ್ಲಕ್ಕಿ) | 40 | 17.84 |
| ಮೆ: ಟಾಟಾ ಮೋಟಾರ್ಸ್‌ಲಿ | 13.5 ಮೀ ಎಸಿ ಸ್ಲೀಪರ್ | 04 | 2.65 |
| ಮೆ: ಟಾಟಾ ಮೋಟಾರ್ಸ್‌ಲಿ | 13.5 ಮೀ ನಾನ್‌ಎಸಿ ಸ್ಲೀಪರ್ | 04 | 2.45 |
| | **ಒಟ್ಟು** | **943** | **392.42** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ**

| ಕಂಪನಿ ಹೆಸರು | ಬಸ್ಸಿನ ಮಾದರಿ | ಖರೀದಿಸಲಾದ ಬಸ್ಸುಗಳ ಸಂಖ್ಯೆ | ಖರೀದಿ ಮೊತ್ತ |
|---|---|---|---|
| ಮೆ\|\| ಅಶೋಕ್ ಲೇಲ್ಯಾಂಡ್ | 10 ಬಿ.ಎಸ್-6 ಲೇಲ್ಯಾಂಡ್ | 10 | 433.5 |

CESLನ ಫೇಮ್-2 ಯೋಜನೆಯಡಿಯಲ್ಲಿ, M/s. TML Smart City Mobility Solutions Ltd,. ರವರಿಂದ ಸಂಸ್ಥೆಗೆ ಸರಬರಾಜು ಮಾಡಿರುವ 333 ಎಲೆಕ್ಟ್ರಿಕ್ ಬಸ್ಸುಗಳನ್ನು ಪ್ರತಿ ಕಿ.ಮೀ.ಗೆ ರೂ.41.01 ರಂತೆ ಜಿಸಿಸಿ ಆಧಾರದ ಮೇಲೆ ಕಾರ್ಯಾಚರಣೆ ಮಾಡಲಾಗುತ್ತಿದೆ.

**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ**

| ಕಂಪನಿ ಹೆಸರು | ಬಸ್ಸಿನ ಮಾದರಿ | ಖರೀದಿಸಲಾದ ಬಸ್ಸುಗಳ ಸಂಖ್ಯೆ | ಖರೀದಿ ಮೊತ್ತ |
|---|---|---|---|
| ಮೇ: ಅಶೋಕ ಲೇಲ್ಯಾಂಡ್ | ಗ್ರಾಮಾಂತರ ಸಾರಿಗೆ | 50 | 19.89 |
| | | 375 | 151.26 |
| | ನಾನ್ ಎ/ಸಿ ಪಲ್ಲಕ್ಕಿ | 10 | 4.45 |
| ವ್ಹಿ.ಇ. ಕಮರ್ಷಿಯಲ್ | ಮಲ್ಟಿ ಎಕ್ಸೆಲ್ ಎ/ಸಿ ಸ್ಲೀಪರ್ | 02 | 3.61 |
| | **ಒಟ್ಟು** | **437** | **179.21** |

**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ**

| ಕಂಪನಿ ಹೆಸರು | ಬಸ್ಸಿನ ಮಾದರಿ | ಖರೀದಿಸಲಾದ ಬಸ್ಸುಗಳ ಸಂಖ್ಯೆ | ಖರೀದಿ ಮೊತ್ತ |
|---|---|---|---|
| ಮೇ\|\| ಅಶೋಕ ಲೇಲ್ಯಾಂಡ್ ಲಿಮಿಟೆಡ್ | ಕಲ್ಯಾಣ ಕರ್ನಾಟಕ ಸಾರಿಗೆ | 682 | 274.40 |
| ಮೇ\|\| ಅಶೋಕ ಲೇಲ್ಯಾಂಡ್ ಲಿಮಿಟೆಡ್ | ನಾನ್-ಎ.ಸಿ. ಸ್ಲಿಪರ್ ಕೋಚ್ | 30 | 13.30 |
| ಮೇ\|\| ಅಶೋಕ ಲೇಲ್ಯಾಂಡ್ ಲಿಮಿಟೆಡ್ | ಎ.ಸಿ.ಸ್ಲಿಪರ್ ಕೋಚ್ | 02 | 1.02 |
| ಮೇ\|\| ವಿ. ಇ. ಕಮರ್ಷಿಯಲ್ | ಒಲ್ವೋ ಎ.ಸಿ.ಸ್ಲೀಪರ ಕೋಚ್ | 06 | 10.40 |
| ಮೇ\|\| ಅಶೋಕ ಲೇಲ್ಯಾಂಡ್ ಲಿಮಿಟೆಡ್ | (ಕರ್ನಾಟಕ ಸಾರಿಗೆ) | 180 | 74.70 |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
<table>
<tr><td>ಮೆ|| ಅಶೋಕ ಲೇಲ್ಯಾಂಡ್ ಲಿಮಿಟೆಡ್</td><td>(ಎ.ಸಿ.ಸ್ಲೀಪರ್ ಕೋಚ್)</td><td>02</td><td>1.02</td></tr>
<tr><td></td><td>ಒಟ್ಟು</td><td>902</td><td>374.84</td></tr>
</table>
</td></tr>
<tr><td>ಈ</td><td>ಇಲಾಖೆಗಳಲ್ಲಿ ಹಳೆ ಬಸ್ಸುಗಳನ್ನು ಯಾವ ರೀತಿ ವಿಲೇವಾರಿ ಮಾಡಲಾಗುತ್ತಿದೆ:</td><td>ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ನಿರುಪಯುಕ್ತ ವಾಹನಗಳನ್ನು RTO ರವರಿಂದ ನೊಂದಣಿ ಸಂಖ್ಯೆಯನ್ನು ರದ್ದುಪಡಿಸಿ ತಃಖ್ತೆಯನ್ನು ತಯಾರಿಸಿ, ಭಾರತ ಸರ್ಕಾರದ ಅಧೀನ ಸಂಸ್ಥೆಯಾದ ಮೆ|| ಎಂ.ಎಸ್.ಟಿ.ಸಿ. ಅವರ ಇ-ಪೋರ್ಟಲ್ ಸೇವೆ ಬಳಸಿ ಇ-ಹರಾಜಿನ ಮೂಲಕ ಹೆಚ್ಚಿನ ದರ ನಮೂದಿಸಿದ ಬಿಡ್ಡುದಾರರಿಗೆ ಮಾರಾಟ ಮಾಡಿ ವಿಲೇವಾರಿ ಮಾಡಲಾಗುತ್ತಿದೆ.</td></tr>
<tr><td>ಉ</td><td>ಶಕ್ತಿ ಯೋಜನೆಯಿಂದ ಪ್ರತಿ ನಿತ್ಯ ಪ್ರಯಾಣಿಸುತ್ತಿರುವ ಮಹಿಳೆಯರ ಸಂಖ್ಯೆ ಮೊದಲಿಗಿಂತ ಅಂದಾಜು ಎಷ್ಟು ಪ್ರಮಾಣದಲ್ಲಿ ಹೆಚ್ಚಾಗಿದೆ ;</td><td>ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಶಕ್ತಿ ಯೋಜನೆಯಿಂದ ಪ್ರತಿದಿನ ಪ್ರಯಾಣಿಸುತ್ತಿರುವ ಮಹಿಳೆಯರ ಸಂಖ್ಯೆ ಮೊದಲಿಗಿಂತ ಹೆಚ್ಚಾಗಿದ್ದು, ವಿವರ ಕೆಳಗಿನಂತಿದೆ:
<table>
<tr><th>ಸಂಸ್ಥೆ</th><th>ಪ್ರತಿದಿನದ ಸರಾಸರಿ (ಲಕ್ಷಗಳಲ್ಲಿ)</th></tr>
<tr><td>ಕ.ರಾ.ರ.ಸಾ.ನಿಗಮ</td><td>19.27</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>20.00</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>14.30</td></tr>
<tr><td>ಕ.ಕ.ರ.ಸಾ.ನಿಗಮ</td><td>9.27</td></tr>
</table>
</td></tr>
<tr><td>ಊ</td><td>ಈ ಯೋಜನೆಯಿಂದ ಪ್ರತಿ ನಿತ್ಯಾ ಕೆಲಸಕ್ಕೆ ಹೋಗುವ ಸಾರ್ವಜನಿಕರಿಗೆ ವಿದ್ಯಾರ್ಥಿಗಳಿಗೆ ವೃದ್ಧಾಪ್ಯರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಪರ್ಯಾಯವಾಗಿ ರೂಪಿಸಿರುವ ಯೋಜನೆಗಳಾವುವು?</td><td>ಸಾರಿಗೆ ಸಂಸ್ಥೆಗಳಿಂದ 2023-24ರ ಪೂರ್ವದ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರುವುದಿಲ್ಲ.<br>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ 2023-24ರ ಪೂರ್ವದ 07 ವರ್ಷಗಳಿಂದ ಮತ್ತು ಉಳಿದ ಸಾರಿಗೆ ಸಂಸ್ಥೆಗಳಲ್ಲಿ 2023-24ರ ಪೂರ್ವದ 04 ವರ್ಷಗಳಿಂದ ಸಿಬ್ಬಂದಿ ನೇಮಕಾತಿ ಆಗಿರುವುದಿಲ್ಲ.<br>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ 2023-24ರ ಪೂರ್ವದಲ್ಲಿ ಸುಮಾರು ಒಟ್ಟು 3800 ಅನುಸೂಚಿಗಳನ್ನು ಸ್ಥಗಿತಗೊಳಿಸಲಾಗಿತ್ತು. ಸದರಿ ಅನುಸೂಚಿಗಳಲ್ಲಿ ಬಹುತೇಕ ಅನುಸೂಚಿಗಳನ್ನು ಪ್ರಸ್ತುತ ಕಾರ್ಯಚರಣೆ ಮಾಡಲಾಗುತ್ತಿದ್ದು, ನಿಗಮವಾರು ವಿವರ ಕೆಳಕಂಡಂತಿದೆ.<br>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ<br>ಮಹಿಳೆಯರಿಗೆ ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಿರುವುದರಿಂದ ಸರ್ಕಾರಿ ಬಸ್‌ಗಳಲ್ಲಿ ಸಂಚರಿಸುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದ್ದು, ಇದರಿಂದಾಗಿ ಶಾಲಾ ಮಕ್ಕಳಿಗೆ ಅನಾನುಕೂಲವಾಗುತ್ತಿರುವ ಬಗ್ಗೆ ಕೆಲವು ಸ್ಥಳಗಳಲ್ಲಿ ವರದಿಯಾಗಿದ್ದು, ಅಂತಹ ಸ್ಥಳಗಳನ್ನು ಗುರುತಿಸಿ ಆ ಸ್ಥಳಗಳಿಗೆ ನಿಗಮದ ಸಿಬ್ಬಂದಿಗಳನ್ನು ಮೇಲ್ವಿಚಾರಣೆಗಾಗಿ ನಿಯೋಜಿಸಲಾಗುತ್ತಿದೆ ಹಾಗೂ ಬೇಡಿಕೆಗೆ ಅನುಗುಣವಾಗಿ ಹೆಚ್ಚುವರಿ ಸರತಿಗಳನ್ನು ಅಳವಡಿಸಲು ಕ್ರಮವಹಿಸಲಾಗುತ್ತಿದೆ.</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ನಿಗಮದಲ್ಲಿ ಶಕ್ತಿ ಯೋಜನೆ ಜಾರಿಗೂ ಮೊದಲು 45255 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು, ಶಕ್ತಿ ಯೋಜನೆ ಜಾರಿಯಾದ ನಂತರದಲ್ಲಿ 49358 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರತಿದಿನ 4103 ಹೆಚ್ಚುವರಿ ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br>ಮುಂದುವರೆದು, 2024-25 ಸಾಲಿನಲ್ಲಿ 304 ಹೊಸ ಅನುಸೂಚಿಗಳನ್ನು ಕಾರ್ಯಾಚರಿಸಲು ಯೋಜಿಸಲಾಗಿದ್ದು, ಅದರಲ್ಲಿ 259 ಹೊಸ ಅನುಸೂಚಿಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ.<br><br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:**<br>ಸಂಸ್ಥೆಯಲ್ಲಿ ಶಕ್ತಿ ಯೋಜನೆ ಜಾರಿಗೆ ಮೊದಲು 56646 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು. ಶಕ್ತಿ ಯೋಜನೆ ಜಾರಿಯಾದ ನಂತರದಲ್ಲಿ 58369 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ಪ್ರತಿದಿನ 1723 ಹೆಚ್ಚುವರಿ ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br>ಪ್ರಸ್ತುತ ಸಂಸ್ಥೆಯು 5649 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡುತ್ತಿದ್ದು, 2024-25ನೇ ಸಾಲಿನಲ್ಲಿ 6305 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲು ಯೋಜಿಸಲಾಗಿದೆ.<br>ಮುಂದುವರೆದು, ವಿದ್ಯಾರ್ಥಿ ಸಮುದಾಯ/ ಸಾರ್ವಜನಿಕ ಪ್ರಯಾಣಿಕರ ಬೇಡಿಕೆ ಹಾಗೂ ಒತ್ತಡಕ್ಕನುಗುಣವಾಗಿ, ಮೂಲಭೂತ ಸೌಕರ್ಯಗಳ ಲಭ್ಯತೆಗನುಗುಣವಾಗಿ ಹೊಸ ಮಾರ್ಗಗಳನ್ನು ಪರಿಚಯಿಸುವುದು, ಹಾಲಿಯಿರುವ ಮಾರ್ಗಗಳಲ್ಲಿ ಸಾರಿಗೆಗಳನ್ನು ಹೆಚ್ಚಿಸುವುದು ಮತ್ತು ಪ್ರಯಾಣಿಕರ ಸಂಚಾರ ದಟ್ಟಣೆಗನುಗುಣವಾಗಿ ಸಾರಿಗೆಗಳನ್ನು ಪರಿಷ್ಕರಿಸಿ ಕಾರ್ಯಾಚರಣೆಗೊಳಿಸಲಾಗುತ್ತಿದೆ. ಅಲ್ಲದೇ ಯಾವುದೇ ಪ್ರದೇಶಗಳಿಂದ ಸಾರಿಗೆ ಸೌಲಭ್ಯವನ್ನು ಒದಗಿಸುವಂತೆ ಅಥವಾ ಹೆಚ್ಚಿಸುವಂತೆ ಮನವಿಗಳು ಬಂದಲ್ಲಿ, ಪರಿಶೀಲಿಸಿ ಕ್ರಮ ಕೈಗೊಳ್ಳುವ ಪ್ರಕ್ರಿಯೆಯು ನಿರಂತರವಾಗಿ ಜಾರಿಯಲ್ಲಿರುತ್ತದೆ.<br>**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ**<br>ಸಂಸ್ಥೆಯಲ್ಲಿ ಶಕ್ತಿ ಯೋಜನೆ ಜಾರಿಗೂ ಮೊದಲು 4567 ಅನುಸೂಚಿಗಳಿಂದ 34676 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು. ಶಕ್ತಿ ಯೋಜನೆ ಜಾರಿ ನಂತರದಲ್ಲಿ 4640 ಅನುಸೂಚಿಗಳಿಂದ 36395 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರತಿ ದಿನ 1719 ಹೆಚ್ಚುವರಿ ಸರತಿಗಳನ್ನು ಮತ್ತು 73 ಹೆಚ್ಚುವರಿ ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br>ಇದಲ್ಲದೇ ಪ್ರಯಾಣಿಕರ/ವಿದ್ಯಾರ್ಥಿಗಳ ಬೇಡಿಕೆ/ಅವಶ್ಯಕತೆ ಅನುಗುಣವಾಗಿ ಆದ್ಯತೆ ಮೇರೆಗೆ ಸಾರಿಗೆ ಸೌಲಭ್ಯ ಕಲ್ಪಿಸುವ ಪ್ರಕ್ರಿಯೆ ನಿರಂತರ ಜಾರಿಯಲ್ಲಿದೆ.<br>**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ**<br>ಶಕ್ತಿ ಯೋಜನೆ ಜಾರಿಗೂ ಮೊದಲು 4028 ಅನುಸೂಚಿಗಳಿಂದ 22214 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು, ಶಕ್ತಿಯೋಜನೆ ಜಾರಿಯಾದ ನಂತರದಲ್ಲಿ 4666 ಅನುಸೂಚಿಗಳಿಂದ 27334 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಶಕ್ತಿ ಯೋಜನೆಯ ಪೂರ್ವಕ್ಕೆ ಹೋಲಿಸಿದಲ್ಲಿ ಪ್ರತಿ ದಿನ 638 ಹೆಚ್ಚಿನ ಅನುಸೂಚಿಗಳಿಂದ 5120 ಹೆಚ್ಚುವರಿ ಸರತಿಗಳನ್ನು ಕಾರ್ಯಾಚರಣೆಯನ್ನು ಮಾಡಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ವಿದ್ಯಾರ್ಥಿ ಸಮುದಾಯದ ಶಾಲಾ ಕಾಲೇಜು ಸಮಯಕ್ಕೆ/ ಹಿರಿಯ ನಾಗರಿಕರು/ ಸಾರ್ವಜನಿಕ ಪ್ರಯಾಣಿಕರ ಅವಶ್ಯಕತೆಗೆ ಅನುಗುಣವಾಗಿ ಸುತ್ತುವಳಿಗಳು/ಬಸ್ಸುಗಳನ್ನು ಕಲ್ಪಿಸಲು ಈ ಕೆಳಕಂಡ ಅಂಶಗಳನ್ನು ಅನುಸರಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ.<br><br>• ಗ್ರಾಮೀಣ ಪ್ರದೇಶಗಳ ವಿಭಾಗದ ವ್ಯಾಪ್ತಿಯಲ್ಲಿ ಬರುವ ಶಾಲಾ/ಕಾಲೇಜುಗಳ ಪ್ರಾಂಶುಪಾಲರು/ ಮುಖ್ಯಸ್ಥರುಗಳನ್ನು ಸಂಪರ್ಕಿಸಿ, ಶಾಲಾ/ಕಾಲೇಜುಗಳ ಸಮಯಗಳನ್ನು ತಿಳಿದುಕೊಂಡು ಸದರಿ ಸಮಯಕ್ಕೆ ಸಾರಿಗೆಗಳನ್ನು ಕಾರ್ಯಾಚರಿಸಲು ಸೂಕ್ತ ಕ್ರಮ ಕೈಗೊಳ್ಳುವುದು.<br>• ಶಾಲಾ/ಕಾಲೇಜು ವಿದ್ಯಾರ್ಥಿಗಳು ಹೆಚ್ಚಿಗೆ ಸೇರುವ ಬಸ್ ನಿಲ್ದಾಣ/ಜಂಕ್ಷನ್‌ಗಳಲ್ಲಿ ಸಾರಿಗೆ ಸೇವೆಗಳ ಮೇಲ್ವಿಚಾರಣೆಗೆ ಸಂಚಾರ ನಿಯಂತ್ರಕರು/ಇತರ ಮೇಲ್ವಿಚಾರಕರನ್ನು ತಪ್ಪದೇ ನಿಯೋಜಿಸಿ ಸುಗಮ ಕಾರ್ಯಾಚರಣೆ ಬಗ್ಗೆ ನಿಗಾ ವಹಿಸುವುದು.<br>• ವಿಭಾಗದ ಎಲ್ಲಾ ಚಾಲನಾ ಸಿಬ್ಬಂದಿಗಳಿಗೆ ಶಾಲಾ ಕಾಲೇಜು ವಿದ್ಯಾರ್ಥಿಗಳು/ ಹಿರಿಯ ನಾಗರಿಕರು/ ಸಾರ್ವಜನಿಕ ಪ್ರಯಾಣಿಕರ ಬಸ್ಸುಗಳಲ್ಲಿ ಪ್ರಯಾಣಿಸಲು ಅನುವಾಗಲು ನಿಗದಿತ ಬಸ್ ನಿಲ್ದಾಣಗಳಲ್ಲಿ ನಿಲುಗಡೆ ನೀಡಿ ಅವರನ್ನು ಹತ್ತಿಸಿ/ಇಳಿಸಿಕೊಂಡು ಮುಂದೆ ಹೋಗುವುದರ ಜೊತೆಗೆ ವಿದ್ಯಾರ್ಥಿಗಳು/ ಇತರೆ ಸಾರ್ವಜನಿಕರೊಂದಿಗೆ ಸೌಜನ್ಯಯುತವಾಗಿ ವರ್ತಿಸಲು ತಿಳುವಳಿಕೆ ನೀಡುವುದು.<br><br>ಸಾರ್ವಜನಿಕ ಪ್ರಯಾಣಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳ ಬೇಡಿಕೆ/ಅವಶ್ಯಕತೆಗನುಗುಣವಾಗಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಸಾರ್ವಜನಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳು ಸದರಿ ಸಾರಿಗೆಗಳ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ.<br><br>ಸಾರಿಗೆ ಸಂಸ್ಥೆಗಳಲ್ಲಿ 2023-24ರ ಪೂರ್ವದಲ್ಲಿ ಕಾರ್ಯಾಚರಿಸಲಾಗುತ್ತಿದ್ದ ಅನುಸೂಚಿಗಳಿಗಿಂತ ಮೇಲ್ಕಂಡಂತೆ ಹೆಚ್ಚುವರಿ ಅನುಸೂಚಿಗಳನ್ನು ಪ್ರಸ್ತುತ ಕಾರ್ಯಾಚರಣೆ ಮಾಡಲಾಗುತ್ತಿರುವುದರಿಂದ, ಶಕ್ತಿ ಯೋಜನೆ ಜಾರಿಯಿಂದ ಸಾರ್ವಜನಿಕ ಪ್ರಯಾಣಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದಿಲ್ಲ. |

ಸಂಖ್ಯೆ: ಟಿಡಿ 151 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು